## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ 14 ಜಿಲ್ಲೆಗಳ 40 ವಕ್ಫ್ ಸಂಸ್ಥೆಗಳ ಸಂರಕ್ಷಣೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :** 1) ಸರ್ಕಾರಿ ಆದೇಶ ಸಂಖ್ಯೆ: **RD 139 CWP 1977** ದಿನಾಂಕ: 23-08-1979 & **MWD 147 WES 2019**, ದಿನಾಂಕ: 05-02-2020.

2) ಸರ್ಕಾರಿ ಆದೇಶ ಸಂಖ್ಯೆ: **MWD 21 WGA 2022**, ದಿನಾಂಕ:- 03.01.2023.

3) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರ ಪತ್ರ ಸಂಖ್ಯೆ: KBW/A6-2/GTS/RECOMM/02/2018-19, ದಿ: 26-04-2021.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ವಕ್ಫ್ ಸಂಸ್ಥೆಗಳಿಗೆ Grant-in Aid Code ಅನ್ನು ಆಗಸ್ಟ್ 1979 ಹಾಗೂ ಫೆಬ್ರವರಿ 2020 ರಲ್ಲಿ ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ 2017-18 ನೇ ಸಾಲಿನಲ್ಲಿ ರಾಜ್ಯದಲ್ಲಿನ ವಕ್ಫ್ ಆಸ್ತಿಗಳ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ಸರ್ಕಾರದ ಆದೇಶ ಸಂಖ್ಯೆ: MWD 28 WGA 2017, ದಿನಾಂಕ: 28-08-2017 ರಲ್ಲಿ ರೂ.234.50/- ಲಕ್ಷ ಮತ್ತು ಸರ್ಕಾರದ ಆದೇಶ ಸಂಖ್ಯೆ: MWD 61 WGA 2017, ದಿನಾಂಕ: 16-02-2018 ರಲ್ಲಿ ರೂ.231.00/- ಲಕ್ಷಗಳಂತೆ ಒಟ್ಟು ರೂ.465.50/- ಲಕ್ಷಗಳ ಅನುದಾನವನ್ನು ರದ್ದುಗೊಳಿಸಿ ಹಿಂಪಡೆಯಲಾಗಿದೆ.

ಮೇಲೆ ಓದಲಾದ (3)ರ ಪತ್ರದಲ್ಲಿ ರಾಜ್ಯದ ವಕ್ಫ್ ಸಂಸ್ಥೆಗಳ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ವಕ್ಫ್ ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆಗೊಳಿಸಬಹುದೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಇವರು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 21 WGA 2022, ಬೆಂಗಳೂರು, ದಿನಾಂಕ: 04-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರಿ ಆದೇಶ ಸಂಖ್ಯೆ: MWD 21 WGA 2022, ದಿನಾಂಕ:- 03.01.2023 ರಲ್ಲಿ 2017-18ನೇ ಸಾಲಿನಲ್ಲಿ ರಾಜ್ಯದಲ್ಲಿನ ವಕ್ಫ್ ಆಸ್ತಿಗಳ ಸಂರಕ್ಷಣೆಗಾಗಿ ಒಟ್ಟು ರೂ.465.50/- ಲಕ್ಷಗಳ ಅನುದಾನವನ್ನು ರದ್ದುಗೊಳಿಸಿ ಹಿಂಪಡೆಯಲಾಗಿರುವ ಹಿನ್ನೆಲೆಯಲ್ಲಿ, ಈ ಅನುದಾನದ ಪೈಕಿ ರಾಜ್ಯದ 14 ಜಿಲ್ಲೆಗಳ 40 ವಕ್ಫ್ ಸಂಸ್ಥೆಗಳ ಸಂರಕ್ಷಣೆಗಾಗಿ ರೂ.445.00/- ಲಕ್ಷಗಳ ಅನುದಾನವನ್ನು ಅನುಬಂಧದಲ್ಲಿನ ಸಂಸ್ಥೆಗಳ ಎದುರಿಗೆ ಸೂಚಿಸಲಾಗಿರುವ ಪ್ರತ್ಯೇಕ ಮೊತ್ತವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. ಈ ವೆಚ್ಚವನ್ನು MWD 21 WGA 2022, ದಿನಾಂಕ:-03.01.2023ರಲ್ಲಿ ಹಿಂಪಡೆಯಲಾಗಿರುವ ಅನುದಾನದಿಂದಲೇ ಭರಿಸತಕ್ಕದ್ದು.
2. ಮೇಲೆ ಓದಲಾದ (1)ರ ಆದೇಶದಂತೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು Grant-in-Aid ನಲ್ಲಿರುವ ಸೂಚನೆಗಳನ್ನು ವಕ್ಫ್ ಸಂಸ್ಥೆಗಳಿಗೆ ಹಣ ಬಿಡುಗಡೆಗೊಳಿಸುವ ಮುನ್ನ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

.....2

I.No. 799
- 4 JAN 2023

3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಲೋಕೋಪಯೋಗಿ ಇಲಾಖೆಯ ಸ್ಥಳೀಯ AEE ಅಭಿಯಂತರರೊಂದಿಗೆ ಖುದ್ದಾಗಿ ಸಂಸ್ಥೆಗಳ ಸ್ಥಳ ತನಿಖೆ ನಡೆಸಿ, ತದನಂತರ ಅನದಾನವನ್ನು ಬಿಡುಗಡೆ ಮಾಡತಕ್ಕದ್ದು ಹಾಗೂ ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡತಕ್ಕದ್ದು.
4. ರೂ.5.00 ಲಕ್ಷಕ್ಕಿಂತ ಹೆಚ್ಚು ಅನುದಾನ ಮಂಜೂರು ಮಾಡಲಾಗಿರುವ ವಕ್ಫ್ ಸಂಸ್ಥೆಗಳಿಗೆ ಮೊದಲನೇ ಕಂತಿನ ರೂ.5.00 ಲಕ್ಷಗಳನ್ನು ಪ್ರಥಮ ಕಂತಿನಲ್ಲಿ ಬಿಡುಗಡೆ ಮಾಡಿ ಇನ್ನುಳಿದ ಮೊತ್ತವನ್ನು ಎರಡನೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು. 2ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಮೊದಲು ಕಾಮಗಾರಿಯ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ಪ್ರಗತಿಯಾದಲ್ಲಿ ಹಣ ಬಳಕೆ ಪ್ರಮಾಣ ಪತ್ರ ಪಡೆದ ನಂತರ ಮಾತ್ರ ಅನುದಾನ ಬಿಡುಗಡೆ ಮಾಡತಕ್ಕದ್ದು.
5. ರೂ.5.00ಲಕ್ಷಕ್ಕಿಂತ ಕಡಿಮೆ ಅನುದಾನ ಮಂಜೂರಾಗಿರುವ ವಕ್ಫ್ ಸಂಸ್ಥೆಗಳಿಗೆ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು.
6. ಸದರಿ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆಗೊಳಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಬಳಕೆಯಾಗಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಸಂಸ್ಥೆಗಳು ಕಡ್ಡಾಯವಾಗಿ ಕಳುಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022, ದಿನಾಂಕ: 04.04.2022 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Mukhtar Pasha H.G.
4/1/2023

(ಮುಕ್ತಾರ್ ಪಾಷ ಹೆಚ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ವಿಧಾನ ಸೌಧ, ಬೆಂಗಳೂರು.
3) ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು.
5) ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7) ಅಧ್ಯಕ್ಷರು/ವಕ್ಫ್ ಅಧಿಕಾರಿಗಳು, ಜಿಲ್ಲಾ ವಕ್ಫ್ ಸಲಹಾ ಸಮಿತಿ, ಬೆಳಗಾವಿ, ಉಡುಪಿ, ಶಿವಮೊಗ್ಗ, ತುಮಕೂರು, ಕಲಬುರಗಿ, ವಿಜಯಪುರ, ಹುಬ್ಬಳ್ಳಿ-ಧಾರವಾಡ, ಚಿಕ್ಕಮಗಳೂರು, ಗದಗ್, ಬೆಂಗಳೂರು ನಗರ, ಬಾಗಲಕೋಟೆ, ಯಾದಗಿರಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳು.
8) ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ,(24x7) ವಸಂತನಗರ ಬೆಂಗಳೂರು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: MWD 21 WGA 2022,**
**ಬೆಂಗಳೂರು, ದಿನಾಂಕ: 04.01.2023 ಕ್ಕೆ ಅನುಬಂಧ**

| ಕ್ರ.ಸಂ. | ಸಂಸ್ಥೆಯ ಹೆಸರು | ಕಾಮಗಾರಿ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| | **1.ಉಡುಪಿ ಜಿಲ್ಲೆ** | | |
| 1 | ಜಾಮಿಯಾ ಮಸ್ಜಿದ್, ಉಪ್ಪಿನಕೋಟೆ, ಬ್ರಹ್ಮಾವರ ತಾ, ಉಡುಪಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 05.00 |
| 2 | ಬದ್ರಿಯಾ ಮಸ್ಜಿದ್ (ಬದ್ರಿಯಾ ಜಾಮಿಯಾ ಮಸ್ಜಿದ್) ಮಾವಿನಕಟ್ಟೆ .ಕುಂದಾಪುರ ತಾಲೂಕು, ಉಡುಪಿ | ಕಾಂಪೌಂಡ್ ನಿರ್ಮಾಣ | 10.00 |
| | **2.ಶಿವಮೊಗ್ಗ ಜಿಲ್ಲೆ** | | |
| 3 | ಮುಸ್ಲಿಂ ಮಸೀದಿ, ಗಾಂಧಿನಗರ ಗ್ರಾಮ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| 4 | ಮುಸ್ಲಿಂ ಸಮುದಾಯ ಭವನ ನಿರ್ಮಾಣ, ಬೇಗೂರು ಗ್ರಾಮ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| | **3. ದಕ್ಷಿಣ ಕನ್ನಡ ಜಿಲ್ಲೆ** | | |
| 5 | ಮಸ್ಜಿದರ್ರಹ್ಮಾನ್ ಪಡಿಕ್ಕಲ್, ಕೈರಂಗಳ, ಬಂಟ್ವಾಳ, ದಕ್ಷಿಣ ಕನ್ನಡ | ಕಾಂಪೌಂಡ್ ನಿರ್ಮಾಣ | 15.00 |
| 6 | ಗೌಸಿಯಾ ಜುಮ್ಮಾ ಮಸ್ಜಿದ್ ಮತ್ತು ಮದರಸ, ಮೊಂಟುಗೋಳಿ, ಬಂಟ್ವಾಳ, ದಕ್ಷಿಣ ಕನ್ನಡ | ಕಾಂಪೌಂಡ್ ನಿರ್ಮಾಣ | 15.00 |
| 7 | ಹಯಾತುಲ್ ಇಸ್ಲಾಂ ಮದರಸ ಮತ್ತು ರಹ್ಮಾನಿಯಾ ಜುಮ್ಮಾ ಮಸ್ಜಿದ್ ಕಮಿಟಿ, ನಾರ್ಶ, ಕೊಲ್ನಾಡು ಗ್ರಾಮ, ಬಾರಬೆಟ್ಟು, ಬಂಟ್ವಾಳ | ಕಾಂಪೌಂಡ್ ನಿರ್ಮಾಣ | 15.00 |
| 8 | ಗೌಸಿಯಾ ಜುಮ್ಮಾ ಮಸ್ಜಿದ್(ರಿ), ಕೋರ್ಟ್ ರಸ್ತೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ | ಕಾಂಪೌಂಡ್ ನಿರ್ಮಾಣ | 10.00 |
| 9 | ಮುಹ್ಯುದ್ದೀನ್ ಜುಮ್ಮಾ ಮಸ್ಜಿದ್, ನೂರುಲ್ ಹುದಾ ಮದರಸ ,ಪಿಚಲಾರು, ಬಂಗಾಡಿ ಇಂದಬೆಟ್ಟು ಗ್ರಾಮ, ಬೆಳ್ತಂಗಡಿ, | ಕಾಂಪೌಂಡ್ ನಿರ್ಮಾಣ | 10.00 |
| 10 | ಅಲ್ ಮದರಸತುಲ್ ನೂರಾನಿಯ ಮದರಸ ಮತ್ತು ಮಸ್ಜಿದ್ ಎರ್ಮಾಳ, ಬಂಗಾಡಿ ಪೋಸ್ಟ್, ಇಂದಬೆಟ್ಟು ಗ್ರಾಮ, ಬೆಳ್ತಂಗಡಿ | ಕಾಂಪೌಂಡ್ ನಿರ್ಮಾಣ | 10.00 |
| | **4.ಕಲಬುರಗಿ ಜಿಲ್ಲೆ** | | |
| 11 | ಅಲ್ಲಾ ಖಿಲ್ಲಾ ಮೌಲಾಲಿ ಇಸ್ಮಾಯಿಲ್ ಖಾದ್ರಿ (ಸುನ್ನಿ), ದಿಕ್ಸಂಗಾ (ಕೆ) ಗ್ರಾಮ, ಅಫಜಲಪೂರ ತಾ, ಕಲಬುರಗಿ ಜಿಲ್ಲೆ. | ಕಾಂಪೌಂಡ್ ನಿರ್ಮಾಣ | 15.00 |
| 12 | ಮುಸ್ಲಿಂ ಖಬರಸ್ಥಾನ ,ಹಿಪ್ಪರಹ (ಎಸ್ ಎನ್), ಜೇವರ್ಗಿ ತಾಲೂಕು, ಕಲಬುರಗಿ | ಕಾಂಪೌಂಡ್ ನಿರ್ಮಾಣ | 10.00 |
| 13 | ಖಬರಸ್ಥಾನ , ಸಿಗರ್ತಹಳ್ಳಿ ಗ್ರಾಮ, ಜೇವರ್ಗಿ ತಾಲೂಕು, ಕಲಬುರಗಿ | ಕಾಂಪೌಂಡ್ ನಿರ್ಮಾಣ | 10.00 |
| 14 | ದರ್ಗಾ ಶರೀಫ್ ಹಝರತ್ ಖಾಜಾ ಬಂದೇ ನವಾಝ್ (ಸುನ್ನಿ), ಕಲಬುರಗಿ | ಕಾಂಪೌಂಡ್ ನಿರ್ಮಾಣ | 10.00 |

.....2

| | | | | |
|---|---|---|---|---|
| 15 | ಮಸ್ಜಿದ್ ಎ ಮಹಬೂಬ್ ,ಮುಹಸಿನ್ ಕಾಲೊನಿ, ಕಲಬುರಗಿ | ಕಾಂಪೌಂಡ್ ನಿರ್ಮಾಣ | | 10.00 |
| | **5.ವಿಜಯಪುರ ಜಿಲ್ಲೆ** | | | |
| 16 | ಅಂಜುಮನ್ ಎ-ಇಸ್ಲಾಂ ಕಮೀಟಿ, ಚಡಚಣ, ವಿಜಯಪುರ ತಾ ಮತ್ತು ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |
| 17 | ಸುನ್ನಿ ಖಬರಸ್ತಾನ, ಶಿವಣಗಿ, ವಿಜಯಪುರ ತಾ ಮತ್ತು ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |
| | **6.ಬಾಗಲಕೋಟೆ ಜಿಲ್ಲೆ** | | | |
| 18 | ಮೌಲಾನಾ ಅಬ್ದುಲ್ ಕಲಾಂ ಆಝಾದ್ ಅಸೋಸಿಯೇಶನ್, ಆಝಾದ್ ನಗರ, ಹುನಗುಂದ | ಕಾಂಪೌಂಡ್ ನಿರ್ಮಾಣ | | 5.00 |
| | **7.ಬೆಂಗಳೂರು ನಗರ ಜಿಲ್ಲೆ** | | | |
| 19 | ಉಖ್ವಾ ಮಸ್ಜಿದ್ ಟ್ರಸ್ಟ್, ೨ನೇ ಅಡ್ಡರಸ್ತೆ, ಅಶ್ವಥ್‌ನಗರ, ಥಣಿಸಂದ್ರ, ಡಾ, ಎಸ್.ಆರ್.ಕೆ.ನಗರ ಅಂಚೆ, ಬೆಂಗಳೂರು-೫೬೦೦೭೭ | ಕಾಂಪೌಂಡ್ ನಿರ್ಮಾಣ | | 10.00 |
| | **8. ಚಿಕ್ಕಮಗಳೂರು ಜಿಲ್ಲೆ** | | | |
| 20 | ಜಾಮೀಯಾ ಮಸೀದಿ, ಬಾಳೇ ಹೊನ್ನೂರು, ಎನ್.ಆರ್. ಪುರ ತಾಲೂಕು, ಚಿಕ್ಕಮಗಳೂರು ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 20.00 |
| 21 | ಮಸ್ಜಿದುಲ್ ತಕ್ವಾ , ಸಖರಾಯಪಟ್ಟಣ ಕಡೂರು ತಾಲೂಕು, ಚಿಕ್ಕಮಗಳೂರು | ಕಾಂಪೌಂಡ್ ನಿರ್ಮಾಣ | | 10.00 |
| 22 | ಹಿದಾಯತ್ ಇಸ್ಲಾಂ ಮದರಸ, ಮಸೀದಿ, ಜೋಗೀಸರ, ಚಿಕ್ಕಮಗಳೂರು | ಕಾಂಪೌಂಡ್ ನಿರ್ಮಾಣ | | 10.00 |
| 23 | ಅಲ್ ಬದ್ರಿಯಾ ಜುಮ್ಮಾ ಮಸ್ಜಿದ್, ಮಸೀದಿಕೆರೆ, ಎನ್ ಆರ್ ಪುರ ತಾಲೂಕು, ಚಿಕ್ಕಮಗಳೂರು | ಕಾಂಪೌಂಡ್ ನಿರ್ಮಾಣ | | 15.00 |
| | **9. ಕೊಡಗು ಜಿಲ್ಲೆ** | | | |
| 24 | ಶಾಫಿ ಜುಮ್ಮಾ ಮಸ್ಜಿದ್ ಗುಂಡಿಗೆರೆ, ಬೇಟೋಳಿ ಗ್ರಾಮ, ವಿರಾಜಪೇಟೆ, ಕೊಡಗು | ಕಾಂಪೌಂಡ್ ನಿರ್ಮಾಣ | | 10.00 |
| | **10. ಬೆಳಗಾವಿ ಜಿಲ್ಲೆ** | | | |
| 25 | ಸರ್ವೆ ನಂ. ೩೭೯, ಈದ್ಗಾ ಜಮೀನು, ದೊಡವಾಡ ಗ್ರಾಮ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |
| 26 | ಮುಸ್ಲಿಂ ಜಮಾತ ದೊಡ್ಡ ಮಜೀದ, ಮಮದಾಪೂರ ಗ್ರಾಮ, ಗೋಕಾಕ ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |
| 27 | ಮುಸ್ಲಿಂ ಜಮಾತ ಖಾದೀರಶಾವಲಿ ದರ್ಗಾ, ಮಮದಾಪೂರ ಗ್ರಾಮ, ಗೋಕಾಕ ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |
| 28 | ಅಕ್ಸಾ ಮಜೀದ್, ಕಾಮನಕಟ್ಟಿ (ಯಾದವಾಡ) ಗ್ರಾಮ, ಗಿರಿಸಾಗರ ಗಲ್ಲಿ, ಮೂಡಲಗಿ ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |
| 29 | ನೂರಾನಿ ಮಜೀದ್, ಸುಣಧೋಳಿ ಗ್ರಾಮ, ಮೂಡಲಗಿ ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | | 10.00 |

.....3

| | | | |
|---|---|---|---|
| 30 | ಮೊಹಮ್ಮದಿಯಾ ಜಾಮೀಯಾ ಮಸಜೀದ್ ಕಬ್ರುಸ್ತಾನ, ಹುಣಶೀಕಟ್ಟಿ ಗ್ರಾಮ, ಕಿತ್ತೂರು ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 15.00 |
| 31 | ಮದರಸಾ ಸಂಸ್ಥೆ, ಸತ್ತಿ ಗ್ರಾಮ, ಅಥಣಿ ತಾ, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| 32 | ಮುಸ್ಲಿಂ ಜಮಾತ, ಸತ್ತಿ ಟ್ರುಸ್ಟ, ಸತ್ತಿ ಗ್ರಾಮ, ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| | **11. ತುಮಕೂರು ಜಿಲ್ಲೆ** | | |
| 33 | ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾ, ಹೊನ್ನೇಬಾಗಿ ಗ್ರಾಮದ ಸ.ನಂ ೩೫/೩ ಹಾಗೂ ಸ.ನಂ. ೩೫/೬ ರ ಮುಸ್ಲಿಂ ಸ್ಮಾಶಾನ | ಕಾಂಪೌಂಡ್ ನಿರ್ಮಾಣ | 20.00 |
| | **12. ಹುಬ್ಬಳ್ಳಿ-ಧಾರವಾಡ ಜಿಲ್ಲೆ** | | |
| 34 | ಅಲ್ ಮದೀನ ಅಹ್ಲೆ ಸುನ್ನತುಲ್ ಜಮಾತ್, ಶಾಂತಿನಿಕೇತನ್, ಭೈರದೇವರಕೊಪ್ಪ ಪಿ.ಬಿ. ರಸ್ತೆ, ಹುಬ್ಬಳ್ಳಿ, ಧಾರವಾಡ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| | **13. ಗದಗ್ ಜಿಲ್ಲೆ** | | |
| 35 | ಅಂಜುಮನ್ ಇ-ಇಸ್ಲಾಂ ಕಮೀಟಿ, ಮಜ್ಜೂರ, ಶಿರಹಟ್ಟಿ ತಾ, ಗದಗ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 15.00 |
| 36 | ಮಸೀದಿ-ಏ-ಅನ್ಸಾರ, ಗದಗ-ಬೆಟಗೇರಿ ಅವಳಿ ನಗರ, ಬೆಟಗೇರಿ, ಗದಗ ಜಿಲ್ಲೆ. | ಕಾಂಪೌಂಡ್ ನಿರ್ಮಾಣ | 15.00 |
| 37 | ಹಜರತ್ ಮೌಲಾನಿ ಕೌಡಫೀರಾ ಕಮಿಟಿ, ಸೊರಣಗಿ, ಲಕ್ಷ್ಮೇಶ್ವರ ತಾ, ಗದಗ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| 38 | ಮುಸ್ಲಿಂ ಜನಾಂಗದ (ಸುನ್ನಿ) ಖಬರಸ್ಥಾನ, ರಣತೂರ, ಶಿರಹಟ್ಟಿ ತಾ, ಗದಗ ಜಿಲ್ಲೆ | ಕಾಂಪೌಂಡ್ ನಿರ್ಮಾಣ | 10.00 |
| | **14. ಯಾದಗಿರಿ ಜಿಲ್ಲೆ** | | |
| 39 | ಮಸ್ಜಿದ್ ಎ ಮೆಹಬೂಬಿ ಅರೇಬಿಕ್ ಮದರಸ, ಸ್ಟೇಷನ್ ಏರಿಯಾ, ಯಾದಗಿರಿ ಪಟ್ಟಣ , ಯಾದಗಿರಿ | ಕಾಂಪೌಂಡ್ ನಿರ್ಮಾಣ | 10.00 |
| 40 | ಮುಸ್ಲಿಂ ಖಬರಸ್ತಾನ ,ಯಾಳಗಿ ಗ್ರಾಮ, ಸ.ನಂ.೩೮೧ ಸುರಪೂರ ತಾಲೂಕು, ಯಾದಗಿರಿ | ಕಾಂಪೌಂಡ್ ನಿರ್ಮಾಣ | 5.00 |
| | ಒಟ್ಟು | | 445.00 |

(ನಾಲಕ್ಕು ಕೋಟಿ ನಲವತ್ತೈದು ಲಕ್ಷ ರೂಪಾಯಿಗಳು ಮಾತ್ರ)

(ಮುಕ್ತಾರ್ ಪಾಷ ಹೆಚ್.ಜಿ) 4/1/2023

ಸರ್ಕಾರದ ಅಧೀನ ಕಾರ್ಯದರ್ಶಿ

ಅಲ್ಪಸಂಖ್ಯಾತರ ಕಲ್ಯಾಣ, ಹಜ್

ಮತ್ತು ವಕ್ಫ್ ಇಲಾಖೆ